# ಕಲಿಕೆಗಾಗಿ ಹೊಸಹಾದಿ ತೆರೆಯೋಣ

# ಮುನ್ನಡೆಯುವ

## ಕನ್ನಡ

## KANNADA

**ತರಗತಿ - 7**

**State Council of Educational and Research and Training (SCERT), Kerala.**

## ಕಲಿಕೆಗಾಗಿ ಹೊಸಹಾದಿ ತೆರೆಯೋಣ

## ಮುನ್ನಡೆಯುವ

### ಮುನ್ನುಡಿ

ಮಾರಕವಾದ ಕೋವಿಡ್ ಮಹಾಮಾರಿಯ ಅಲೆಯಿಂದ 2019 ರಿಂದ 2021 ರ ವರೆಗೆ ವಿದ್ಯಾರ್ಥಿಗಳಿಗೆ ಪೂರ್ಣ ರೂಪದಲ್ಲಿ ನೇರವಾದ ಕಲಿಕಾನುಭವಗಳು ಲಭಿಸದಿರುವುದರಿಂದ ಅವರ ಕಲಿಕಾ ಗುಣಮಟ್ಟದಲ್ಲಿ ಹಿಂಜರಿಕೆ ಉಂಟಾಗಿರುವುದಾಗಿ 2022 ರ ಕಾಲುವಾರ್ಷಿಕ ಮೌಲ್ಯಮಾಪನದಿಂದ ಲಭಿಸಿದ ಫಲಿತಾಂಶಗಳ ವಿಶ್ಲೇಷಣೆ ಮತ್ತು ಅಧ್ಯಾಪಕರ ಅನುಭವಗಳಿಂದ ವೇದ್ಯವಾಗಿರುತ್ತದೆ. ಮೊದಲಿನ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಲಭಿಸಬೇಕಾಗಿದ್ದ ಕೆಲವು ಆಶಯಗಳನ್ನು ಆರ್ಜಿಸುವುದಕ್ಕೂ ಪ್ರಸ್ತುತ ತರಗತಿಯ ಕಲಿಕೆಯನ್ನು ಮತ್ತಷ್ಟು ಉತ್ತಮಗೊಳಿಸುವುದಕ್ಕೂ ಸಹಕಾರಿಯಾಗುವ ಒಂದು ಕಲಿಕಾ ಸಹಾಯಿಯನ್ನು ತಯಾರಿಸಿ ಕೊಡಲಾಗಿದೆ. ಇದರಲ್ಲಿ ವಿದ್ಯಾರ್ಥಿಗೆ ನಷ್ಟವಾದ ಕಲಿಕಾನುಭವಗಳ ಕುರಿತಾದ ವಿವರಗಳನ್ನು ಮತ್ತು ಅದನ್ನು ಪರಿಹರಿಸುವ ಮಾರ್ಗೋಪಾಯಗಳನ್ನು ಸೂಚಿಸಲಾಗಿದೆ. ವಿದ್ಯಾರ್ಥಿಗಳು ಈ ಕಲಿಕಾ ಸಹಾಯಿಯ ನೆರವಿನಿಂದ ಸ್ವಯಂ ಕಲಿಕೆ ಮತ್ತು ಅಧ್ಯಾಪಕರ ಸಹಾಯದಿಂದ ನಷ್ಟವಾದ ಕಲಿಕಾನುಭವಗಳನ್ನು ಪುನಃ ಆರ್ಜಿಸಿಕೊಂಡು ಆತ್ಮವಿಶ್ವಾಸದಿಂದ ಕಲಿಕೆಯಲ್ಲಿ ಮುನ್ನಡೆಯುವಂತಾಗಲಿ ಎನ್ನುವ ಶುಭ ಹಾರೈಕೆ.

**ನಿರ್ದೇಶಕರು,**

**SCERT, ಕೇರಳ**

**ವಿಷಯ : ಕನ್ನಡ ಮೂಲಪತ್ರ Kannada AT**

**ಯುನಿಟ್ : ಚೆಲುವು ತುಂಬಲಿ & ಬೇವು-ಬೆಲ್ಲ**

**ಚಟುವಟಿಕೆ - 1**

ನೀವು ಹಲವು ರೀತಿಯ ಪತ್ರಗಳ ಬಗ್ಗೆ ತಿಳಿದಿರುವಿರಲ್ಲವೇ? ಪ್ರತಿಯೊಂದು ಪತ್ರಕ್ಕೂ ತನ್ನದೇ ಆದ ವಿಶೇಷತೆಯಿದೆ. ಈ ಕೆಳಗೆ ನೀಡಿರುವ ಪತ್ರಗಳನ್ನು ಮತ್ತು ಅವುಗಳನ್ನು ಉಪಯೋಗಿಸುವ ಸಂದರ್ಭಗಳನ್ನು ಪರಸ್ಪರ ಗೆರೆ ಎಳೆದು ಜೊತೆಗೊಳಿಸಿರಿ.

| | |
|---|---|
| **ಆಮಂತ್ರಣ ಪತ್ರ** | ವಿವಿಧ ಇಲಾಖೆಗಳ ಸೇವೆ ಲಭಿಸುವಂತೆ ಕೋರಿ ಬರೆಯುವ ಪತ್ರ |
| **ಅಭಿನಂದನಾ ಪತ್ರ** | ತನ್ನ ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳಲು ಬರೆಯುವ ಪತ್ರ |
| **ಮನವಿ ಪತ್ರ** | ಒಬ್ಬ ವ್ಯಕ್ತಿಯ ಸಾಧನೆಯನ್ನು ಪ್ರಶಂಸಿಸುವ ಕುರಿತು ಬರೆಯುವ ಪತ್ರ |
| **ವೈಯಕ್ತಿಕ ಪತ್ರ** | ಕಾರ್ಯಕ್ರಮಕ್ಕೆ ಬರಬೇಕೆಂದು ಕೇಳಿಕೊಳ್ಳುವ ಪತ್ರ |

**ಚಟುವಟಿಕೆ -2**

ನಾವು ಯಾವೆಲ್ಲಾ ಅಗತ್ಯಗಳಿಗಾಗಿ ಮನವಿ ಪತ್ರವನ್ನು ಬರೆಯುತ್ತೇವೆ?

..........................................................................................................

..........................................................................................................

..........................................................................................................

ಮನವಿ ಪತ್ರದಲ್ಲಿ ಯಾವೆಲ್ಲಾ ವಿಚಾರಗಳನ್ನು ಸೇರಿಸಬೇಕು?


.................................................................................................................................

.................................................................................................................................

ನಿಮ್ಮ ಊರಿನಲ್ಲಿ ರಾತ್ರಿ ಸಂಚಾರಕ್ಕೆ ಬೀದಿ ದೀಪದ ವ್ಯವಸ್ಥೆಗಾಗಿ ಸ್ಥಳೀಯ ಪಂಚಾಯತ್ ಗೆ ಮನವಿ ಮಾಡಿಕೊಂಡು ಪತ್ರ ಬರೆಯಿರಿ.

**ಚಟುವಟಿಕೆ -3**

ನೀರು ಪ್ರಾಕೃತಿಕ ಸಂಪತ್ತು. ಇದನ್ನು ಮಿತವಾಗಿ ಬಳಸಬೇಕು. ನೀರು ಎಂದಾಕ್ಷಣ ನಿಮ್ಮ ಮನಸ್ಸಲ್ಲಿ ಏನೆಲ್ಲಾ ವಿಚಾರಗಳು ಮೂಡುತ್ತದೆ. ಈ ಕೆಳಗೆ ನೀಡಿರುವ ಪದಸೂರ್ಯವನ್ನು ಭರ್ತಿ ಮಾಡಿರಿ.




**ಚಟುವಟಿಕೆ- 4**

ಈ ಮೇಲೆ ಭರ್ತಿ ಮಾಡಿದ ಪದಸೂರ್ಯದ ವಿಚಾರಗಳನ್ನು ಸೇರಿಸಿಕೊಂಡು 'ನೀರಿನ ಮಹತ್ವ' ಎಂಬ ವಿಷಯದ ಕುರಿತು ಪ್ರಬಂಧ ಬರೆಯಬಹುದೇ?

ಪ್ರಬಂಧದಲ್ಲಿ ಏನೆಲ್ಲಾ ಇರಬೇಕು?

- ..........................................
- ..........................................
- ..........................................
- ..........................................

# ನೀರಿನ ಮಹತ್ವ

## ವಿಷಯ : ಕನ್ನಡ ಮೂಲಪತ್ಯ Kannada BT

## ಯುನಿಟ್ : ಆರೋಗ್ಯವೇ ಭಾಗ್ಯ

**ಚಟುವಟಿಕೆ - 1**

ಸ್ಥಳ: ಕಾಸರಗೋಡು

ದಿನಾಂಕ :...............

ಪ್ರೀತಿಯ ಗೆಳತಿ ಸವಿತಾಳಿಗೆ,

ನಿನ್ನ ಗೆಳತಿ ರಿಹಾನ ಮಾಡುವ ವಂದನೆಗಳು. ಇಲ್ಲಿ ನಾನು ಗೆಳತಿಯರ ಹಾರೈಕೆಯ ಫಲದಿಂದ ಸುಕ್ಷೇಮದಿಂದಿರುವೆ. ನೀನೂ ಕೂಡಾ ಕ್ಷೇಮವಾಗಿರುವೆ ಎಂದು ಭಾವಿಸುತ್ತೇನೆ.

ನಮ್ಮ ಶಾಲೆಯಲ್ಲಿ ಈ ಬಾರಿ ಏರ್ಪಡಿಸಿದ್ದ ಶೈಕ್ಷಣಿಕ ಪ್ರವಾಸದ ಮಧುರಾನುಭವಗಳನ್ನು ನಿನ್ನೊಂದಿಗೆ ಹಂಚಿಕೊಳ್ಳಲು ಸಂತೋಷವೆನಿಸುತ್ತದೆ. ಕಲಾ ಸೃಷ್ಟಿಯ ಸೊಬಗನ್ನು ಕಣ್ಮನಗಳಿಂದ ಸವಿಯಲು, ಸಂಸ್ಕೃತಿ-ಜನಜೀವನಗಳನ್ನು ತಿಳಿದು ಸ್ಫೂರ್ತಿ ಪಡೆಯಲು ಪ್ರವಾಸ ಎಷ್ಟು ಮಹತ್ವದ್ದೆಂಬುದನ್ನು ನಿನನಗೆ ವಿವರಿಸುವ ಅಗತ್ಯವಿಲ್ಲ.

ಈ ಬಾರಿ ನಾವು ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳಾದ ಜೋಗ ಜಲಪಾತ, ಕೆಮ್ಮಣ್ಣುಗುಂಡಿ, ಕುದುರೆ ಮುಖ ಮೊದಲಾದ ರಮ್ಯ ತಾಣಗಳನ್ನು ನೋಡಿ ಬಂದೆವು. ಜೋಗದ ಕುರಿತು ನಾನು ಓದಿ ತಿಳಿದು, ಕಲ್ಪಿಸಿಕೊಂಡದ್ದಕ್ಕಿಂತಲೂ ಹೆಚ್ಚಿನ ಭವ್ಯಾನುಭವವು ಅದನ್ನು ಕಣ್ಣಾರೆ ಕಂಡಾಗ ಉಂಟಾಯಿತು. ಧುಮ್ಮಿಕ್ಕುವ ಜಲಧಾರೆ, ಬೆಳ್ಳನೆ ನೊರೆ, ಸುತ್ತಲಿನ ಪ್ರಕೃತಿ ರಮಣೀಯ ದೃಶ್ಯಗಳು ಕಣ್ಮನ ಸೂರೆಗೊಳ್ಳುವಂತಿದ್ದವು. ಗಿರಿಧಾಮಗಳ ನಿಸರ್ಗ ಸೌಂದರ್ಯ ಕಂಡು ನಾನಂತೂ ಮೂಕ ವಿಸ್ಮಿತನಾಗಿ ಹೋದೆ. ಕೆಮ್ಮಣ್ಣುಗುಂಡಿಯ ರಮ್ಯ ತಾಣ, ಕುದುರೆ ಮುಖದ ನಿಸರ್ಗ ಸೌಂದರ್ಯದ ಮಡುವಿನಲ್ಲಿರುವ ಕಬ್ಬಿಣದ ಕಾರ್ಖಾನೆ ಭೇಟಿಗಳೆಲ್ಲವೂ ನನಗೆ ಮತ್ತು ನನ್ನ ಸಹಪಾಠಿಗಳಿಗೆ ಹೊಸಬಗೆಯ ಅನುಭವವನ್ನು ನೀಡಿತು. ಅವಕಾಶ ದೊರೆತಾಗ ನೀನೂ ಕೂಡ ತಪ್ಪದೆ ಈ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಬಾ.

ಈ ರೀತಿಯ ಪ್ರವಾಸದಿಂದ ನಮ್ಮ ಸಾಹಸ, ಉತ್ಸಾಹ, ಕಲಾಭಿರುಚಿಗಳ ಅಭಿವ್ಯಕ್ತಿಗಳಿಗೆ ಒಳ್ಳೆಯ ಅವಕಾಶ ದೊರೆತು ಭಾವ ವಿಕಾಸಗೊಳ್ಳುತ್ತದೆ.

ವಂದನೆಗಳೊಂದಿಗೆ

ಆದರದ

ರಿಹಾನ- ಬಾಳೆಗದ್ದೆ

ವಿಳಾಸ :
7 ನೇ ತರಗತಿ
ಜಿ.ಎಚ್.ಎಸ್.ಎಸ್ ಕಾಸರಗೋಡು
ಅಂಚೆ : ಕಾಸರಗೋಡು

ಇವರಿಗೆ,
ರೇಶ್ಮ ಎಂ
ಮಾಡ ಮನೆ
ಅಂಚೆ : ಬಂದಡ್ಕ
ವಯಾ : ಚೆಂಗಳ 671541

ಮೇಲೆ ನೀಡಿರುವ ಮಾದರಿ ವೈಯಕ್ತಿಕ / ಖಾಸಗಿ / ಅನೌಪಚಾರಿಕ ಪತ್ರವನ್ನು ಓದಿದಿರಲ್ಲವೇ? ಈ ಪತ್ರದಲ್ಲಿ ಯಾವೆಲ್ಲಾ ಅಂಶಗಳು ಒಳಗೊಂಡಿವೆ ಎಂಬುದನ್ನು ಗಮನಿಸಿರಿ. ವೈಯಕ್ತಿಕ / ಖಾಸಗಿ ಪತ್ರದ ಚೌಕಟ್ಟು ಹೇಗಿರಬೇಕು ಎಂಬುದಕ್ಕೆ ಮೇಲಿನ ಪತ್ರ ಒಂದು ಉದಾಹರಣೆಯಾಗಿದೆ.

ಇದೇ ರೀತಿಯಲ್ಲಿ ನೀವು ಹೋದ ಪ್ರವಾಸಾನುಭವದ ಕುರಿತು ನಿಮ್ಮ ಗೆಳೆಯ ಅಥವಾ ಗೆಳತಿಗೆ ಪತ್ರ ಬರೆಯಿರಿ.

ವೈಯಕ್ತಿಕ / ಖಾಸಗಿ ಪತ್ರದಲ್ಲಿರಬೇಕಾದ ಘಟಕ / ಹಂತಗಳನ್ನು ಕೆಳಗೆ ಅನುಕ್ರಮವಲ್ಲದ ರೀತಿಯಲ್ಲಿ ನೀಡಲಾಗಿದೆ. ಅದನ್ನು ಕ್ರಮವಾಗಿ / ಅನುಕ್ರಮವಾಗಿ ಬರೆಯಿರಿ.

| | |
|---|---|
| 1. ಮುಕ್ತಾಯ | 1. |
| 2. ಸಹಿ | 2. |
| 3. ಸಂಬೋಧನೆ | 3. |
| 4. ಪತ್ರದ ಒಡಲು (ವಿಷಯ) | 4. |
| 5. ದಿನಾಂಕ | 5. |
| 6. ವಿಳಾಸ | 6. |
| 7. ಸ್ಥಳ | 7. |

ಪತ್ರ ಬರೆಯುವಾಗ ಯಾರು ಯಾರಿಗೆ ಯಾವ ಸಂಬೋಧನೆಯನ್ನು ಒಳಗೊಳ್ಳಿಸಬಹುದೆಂದು ನಿಮ್ಮ ಅಧ್ಯಾಪಕರಿಂದ ಕೇಳಿ ತಿಳಿದು ಈ ಕೆಳಗಿನ ಪಟ್ಟಿಯನ್ನು ಪೂರ್ತಿಗೊಳಿಸಿರಿ.

1. ತಂದೆಗೆ : ತೀರ್ಥ ರೂಪರಿಗೆ,
2. ತಾಯಿಗೆ : ..............................................
3. ಹಿರಿಯರಿಗೆ : ..............................................
4. ಕಿರಿಯರಿಗೆ : ..............................................
5. ಗೆಳೆಯ / ಗೆಳತಿಗೆ : ಪ್ರೀತಿಯ ಗೆಳೆಯ / ಗೆಳತಿಗೆ
6. ಅಣ್ಣನಿಗೆ : ..............................................
7. ಅಕ್ಕನಿಗೆ : ..............................................
8. ಅಧಿಕಾರಿಗಳಿಗೆ : ..............................................
9. ಇತರ ವ್ಯವಹಾರ ಪತ್ರಗಳಲ್ಲಿ : ಮಾನ್ಯರೇ,

**ವೈಯಕ್ತಿಕ/ ಖಾಸಗಿ ಪತ್ರಗಳನ್ನು ಬರೆಯುವಾಗ ಗಮನಿಸಬೇಕಾದ ಅಂಶಗಳು**

ವೈಯಕ್ತಿಕ / ಖಾಸಗಿ ಪತ್ರಗಳು ವ್ಯಾವಹಾರಿಕ ಪತ್ರಗಳಿಗಿಂತ ಭಿನ್ನವಾಗಿದ್ದು ಇದರಲ್ಲಿ ಇವರಿಂದ, ಇವರಿಗೆ ಎನ್ನುವ ಎರಡು ವಿಳಾಸಗಳು ಆರಂಭದಲ್ಲಿ ಬರುವುದಿಲ್ಲ. ಕೆಲವೊಮ್ಮೆ ಆರಂಭದಲ್ಲಿ ಇವರಿಂದ ಎಂದು ಬರೆಯದೆ ಎಡಬದಿಯಲ್ಲಿ ನೇರವಾಗಿ ಪತ್ರ ಬರೆಯುವವರ ಹೆಸರು ಮತ್ತು ವಿಳಾಸ ಬರೆಯಲಿರುವ ವಾಡಿಕೆಯೂ ಇದೆ. ಆ ಮೇಲೆ 'ವಿಷಯ' ವೈಯಕ್ತಿಕ ಪತ್ರದಲ್ಲಿ ಪ್ರತ್ಯೇಕವಾಗಿ ಇರುವುದಿಲ್ಲ.

ಪತ್ರದ ಕೊನೆಯಲ್ಲಿ ತಲುಪಬೇಕಾದ ವಿಳಾಸ ಅಂದರೆ 'ಇವರಿಗೆ' ಎಂದು ಯಾರಿಗೆ ಪತ್ರ ಬರೆಯುತ್ತೇವೆಯೋ ಅವರ ವಿಳಾಸ ಇರಬೇಕಾಗುತ್ತದೆ. ಖಾಸಗಿ ಪತ್ರದ ಸಂಬೋಧನೆಯೇ ಅದನ್ನು 'ಖಾಸಗಿ' ಎಂದು ತೋರಿಸಿಕೊಡುತ್ತದೆ.

**ಚಟುವಟಿಕೆ -2**

ಕನ್ನಡ ಅಂಕೆಗಳನ್ನು ಕಲಿಯುವ

| ಇಂಗ್ಲೀಷ್ ಅಂಕೆಗಳು | ಕನ್ನಡ ಅಂಕೆಗಳು |
|---|---|
| 1 | ೧ |
| 2 | ೨ |
| 3 | ೩ |
| 4 | ೪ |
| 5 | ೫ |
| 6 | ೬ |
| 7 | ೭ |
| 8 | ೮ |
| 9 | ೯ |
| 10 | ೧೦ |

ಕೆಳಗೆ ನೀಡಿರುವ ಇಸವಿಯನ್ನು ಕನ್ನಡ ಅಂಕೆಗಳಲ್ಲಿ ಬರೆಯಿರಿ.

1947 : ೧೯೪೭

1950 :.....................

1234 :.....................

1567 :.....................

1892 :.....................

**ಚಟುವಟಿಕೆ - 3**

ಉದಾ :-

**ರಮೇಶನು ನನಗೆ 1050 (೧೦೫೦) ರೂಪಾಯಿ ನೀಡಿದನು.**

ಈ ಮೇಲಿನ ಉದಾಹರಣೆಯನ್ನು ಗಮನಿಸಿರಿ. ಅದೇ ರೀತಿ ಕೆಳಗೆ ನೀಡಿರುವ ವಾಕ್ಯಗಳಲ್ಲಿ ಬರುವ ಇಂಗ್ಲಿಷ್ ಅಂಕೆಗಳನ್ನು ಕನ್ನಡದಲ್ಲಿ ಬರೆಯಿರಿ.

1. ಮಹಾತ್ಮ ಗಾಂಧಿಯವರು 1942 (............................) ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯನ್ನು ಆರಂಭಿಸಿದರು.
2. ಕನ್ನಡದ ಕವಿ ಕುವೆಂಪುರವರು 1904 (............................) ರಲ್ಲಿ ಜನಿಸಿದರು.
3. ಮಂಜೇಶ್ವರ ಗೋವಿಂದ ಪೈಗಳು 1885 (............................) ರಲ್ಲಿ ಜನಿಸಿದರು.

**ಚಟುವಟಿಕೆ - 4**

ಭಾಷಣ ತಯಾರಿಸಿರಿ.

ವಿದ್ಯಾರ್ಥಿಗಳೇ ನೀವು ಶಾಲೆಯಲ್ಲಿ ಏರ್ಪಡಿಸಿದ್ದ ಅನೇಕ ಕಾರ್ಯಕ್ರಮಗಳನ್ನು ನೋಡಿರುವಿರಲ್ಲವೇ?

ಆ ಕಾರ್ಯಕ್ರಮಗಳಿಗೆ ವಿವಿಧ ಕ್ಷೇತ್ರಗಳ ಸಾಧಕರು ಅತಿಥಿಗಳಾಗಿ ಬಂದು ಮಾಡಿದ ಭಾಷಣಗಳನ್ನು ನೀವು ಕೇಳಿರಬಹುದು. ಆ ಭಾಷಣಗಳನ್ನು ಸ್ಮರಣೆಗೆ ತಂದುಕೊಂಡು 'ಶಾಲೆಗಳಲ್ಲಿ ಕ್ರೀಡೋತ್ಸವದ ಮಹತ್ವ' ಎಂಬ ವಿಷಯದ ಕುರಿತು ನಿಮ್ಮ ಶಾಲಾ ನಾಯಕನು ಮಾಡಬಹುದಾದ ಭಾಷಣವನ್ನು ತಯಾರಿಸಿರಿ. ಅದಕ್ಕಾಗಿ ಕೆಳಗೆ ನೀಡಿರುವ ವಿಷಯಗಳನ್ನು ಬಳಸಿಕೊಳ್ಳಿರಿ.

ವೇದಿಕೆಯನ್ನಲಂಕರಿಸಿರುವ ಹಿರಿಯ ಗಣ್ಯ ವ್ಯಕ್ತಿಗಳೇ, ಗುರುವೃಂದದವರೇ, ನನ್ನೆಲ್ಲಾ ಸಹಪಾಠಿ ಮಿತ್ರರೇ.... ಎಲ್ಲರಿಗೂ ನಮಸ್ಕಾರಗಳು,

- ಆರೋಗ್ಯವೇ ಭಾಗ್ಯ ಎನ್ನುವ ನಾಣ್ಣುಡಿಯಿದೆ.
- ಎಲ್ಲಾ ಸಂಪತ್ತಿಗಿಂತಲೂ ಮಿಗಿಲಾದುದು ಆರೋಗ್ಯ
- ಸಂಪತ್ತನ್ನು ಗಳಿಸಬಹುದು ಆದರೆ ಕೆಟ್ಟು ಹೋದ ಆರೋಗ್ಯವನ್ನು ಸಾಧ್ಯವಿಲ್ಲ.
- ಕ್ರೀಡೆ ದೈಹಿಕ ಆರೋಗ್ಯಕ್ಕೆ ಮೂಲ
- ಕ್ರೀಡಾ ಚಟುವಟಿಕೆಗಳು ಮಾನಸಿಕ ಆರೋಗ್ಯವನ್ನು ಹೆಚ್ಚಿಸುತ್ತದೆ.
- ದೈಹಿಕವಾಗಿ ನಮ್ಮನ್ನು ಸದೃಢರನ್ನಾಗಿಸುತ್ತದೆ.
- ಭಾವೈಕ್ಯತೆ ಮತ್ತು ಸಹೋದರತ್ವವನ್ನು ಬೆಳೆಸುತ್ತದೆ.
- ನಾಯಕತ್ವ ಗುಣವನ್ನು ವೃದ್ಧಿಸುತ್ತದೆ.
- ಸೋಲು ಮತ್ತು ಗೆಲುವನ್ನು ಸಮಾನವಾಗಿ ಸ್ವೀಕರಿಸಲು ಕಲಿಸುತ್ತದೆ.
- ಮಾನಸಿಕ ಒತ್ತಡವನ್ನು ದೂರ ಮಾಡುತ್ತದೆ.
- ದೇಶಾಭಿಮಾನವನ್ನು ಮೂಡಿಸುತ್ತದೆ.
- ದೇಶದ ಕೀರ್ತಿಯನ್ನು ಜಗತ್ತಿಗೆ ಸಾರುತ್ತದೆ.
- ಸಮಾಜದಲ್ಲಿ ಗೌರವಯತ ಜೀವನ ನಡೆಸಲು ಅವಕಾಶ ನೀಡುತ್ತದೆ.
- ಉದ್ಯೋಗ ಕಲ್ಪಿಸಿ ಕೊಡುತ್ತದೆ.

ಎಂದು ಹೇಳುತ್ತಾ ನನ್ನ ಚಿಕ್ಕ ಭಾಷಣಕ್ಕೆ ಚುಕ್ಕಿಯನ್ನಿಡುತ್ತಿದ್ದೇನೆ. ಎಲ್ಲರಿಗೂ ವಂದನೆಗಳು.